# ಬಜಾಜ್ ಎಲೆಕ್ಟ್ರಿಕಲ್ಸ್ ಶೇ. 19 ಪ್ರಗತಿ

ಬೆಂಗಳೂರು, ಫೆ. 8: ಬಜಾಜ್ ಎಲೆಕ್ಟ್ರಿಕಲ್ಸ್‌ನ ಬೆಂಗಳೂರು ವಿಭಾಗವು ಕಳೆದ ಆರ್ಥಿಕ ಸಾಲಿನಲ್ಲಿ 80 ಕೋಟಿ ರೂ. ವಹಿವಾಟು ನಡೆಸಿದ್ದು, ಶೇ. 19 ರಷ್ಟು ಪ್ರಗತಿ ಕಂಡಿದೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಜಾಜ್ ಎಲೆಕ್ಟ್ರಿಕಲ್ಸ್‌ನ ಅಧ್ಯಕ್ಷ ಶೇಖರ್ ಬಜಾಜ್, ಕಂಪನಿಯ ಒಟ್ಟಾರೆ 2009-10ನೇ ಸಾಲಿನಲ್ಲಿ ವ್ಯವಹಾರ 2001 ಕೋಟಿ ರೂ. ಗಳಾಗಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ 5 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಇಂಜಿನಿಯರಿಂಗ್ ಅಂಡ್ ಪ್ರಾಡೆಕ್ಟ್, ಗೃಹೋಪಯೋಗಿ ವಸ್ತುಗಳು, ಫ್ಯಾನ್ಸ್, ವಿದ್ಯುದ್ದೀಪಗಳು, ಟ್ಯೂಬ್ ಲೈಟ್, ಗೃಹ ಬಳಕೆ ಸಾಧನಗಳು ಮತ್ತಿತರ 49 ವಸ್ತುಗಳನ್ನು ಬಜಾಜ್ ತಯಾರಿಸುತ್ತಿದೆ ಎಂದರು.



2009-10ರ ಮೊದಲ 9 ತಿಂಗಳಿನಲ್ಲಿ ನಿವ್ವಳ ವಹಿವಾಟು 1470 ಕೋಟಿ ರೂ. ಗಳಷ್ಟಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 112 ಕೋಟಿ ರೂ. ವಹಿವಾಟು ನಡೆಸಿತ್ತು. ಈ ವರ್ಷ ತೆರಿಗೆ ಪೂರ್ವ ಲಾಭ ಶೇ.84ರಷ್ಟು ವೃದ್ಧಿಗೊಂಡು 120.2 ಕೋಟಿ ರೂ. ತಲುಪಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 65.4 ಕೋಟಿ ರೂ. ಲಾಭ ಗಳಿಸಿತ್ತು. ನಿವ್ವಳ ಲಾಭ ಶೇ.91ರಷ್ಟು ಹೆಚ್ಚಿದ್ದು, 41.7 ಕೋಟಿ ರೂ.ಗಳಿಂದ 79.6 ಕೋಟಿ ರೂ. ಮುಟ್ಟಿದೆ ಎಂದು ವಿವರಿಸಿದರು.

ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಅನಂತ ಬಜಾಜ್, ಕಳೆದ ಮೂರು ತ್ರೈಮಾಸಿಕ ಅವಧಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, 835 ಕೋಟಿ ರೂ ಗಳ ಆದೇಶ ಪಡೆಯಲಾಗಿದೆ. ಬೆಂಗಳೂರಿನ ಬೀದಿದೀಪಗಳ ಪೈಕಿ ಶೇ.50 ರಷ್ಟು ಬಜಾಜ್‌ನ ಪಾಲಿದೆ. ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯಲಿರುವ ದೆಹಲಿ ಎಲ್ಲಾ ಬೀದಿ ದೀಪಗಳನ್ನು ಬಜಾಜ್ ಕಂಪನಿಯೇ ಒದಗಿಸಿದೆ. ದೆಹಲಿಯ ಸ್ಟೇಡಿಯಂ, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನ ದೀಪದ ವ್ಯವಸ್ಥೆಯನ್ನೂ ಬಜಾಜ್ ನಿರ್ವಹಿಸಿದೆ. ದುಬೈನ ವಿಶ್ವಖ್ಯಾತಿಯ ದುಬೈಮಾಲ್‌ನ ದೀಪಾಲಂಕಾರದ ಹೊಣೆ ನಿಭಾಯಿಸುವ ಮೂಲಕ ಜಾಗತಿಕ ಮಟ್ಟಕ್ಕೂ ಬಜಾಜ್ ದಾಪುಗಾಲಿಟ್ಟಿದೆ ಎಂದರು.

ಗೋಷ್ಠಿಯಲ್ಲಿ ಮತ್ತೊಬ್ಬ ಕಾರ್ಯನಿರ್ವಾಹಕ ನಿರ್ದೇಶಕ ಆರ್. ರಾಮಕೃಷ್ಣನ್ ಹಾಜರಿದ್ದರು.